ದೀವಟಿಗೆ

ವಾರಪತ್ರಿಕೆ, ಸಂಪಾದಕ: ಸರಿಮನೆ ನಾಗರಾಜ್

ದಲಿತರು ಸ್ವಂತವಾಗಿ ಯೋಚಿಸಬಲ್ಲರೆ?
ಎಚ್ಚೆತ್ತ ದಲಿತರ ದನಿ, ಭಾಷೆ ತಿಳಿಯಲು

ಪಂಚಮ

ಮಾಸ ಪತ್ರಿಕೆ ೭೫ಪೈ.
(ವಾರ್ಷಿಕ ಚಂದಾ: ೧೦ರೂ.)
ವಿಳಾಸ: ಮಾನ್ಸ ಗಂಗೋತ್ರಿ, ... ಕ್ವಾರ್ಟರ್ಸ್ ... ,
ಮೈಸೂರು-೬

ಖಾಸಗಿ ಪ್ರಸಾರಕ್ಕಾಗಿ | ತಾ. ೪-೩-೮೨ ಭಾನುವಾರ ಕೊಪ್ಪ | ೧೧

ಶೃಂಗೇರಿ ತಾ॥ ದಲಿತ ಸಂಘರ್ಷ ಸಮಿತಿ ಶಾಖೆ ಪ್ರಾರಂಭ

ದಲಿತರ ಸಂಘಟನೆಗೆ ನಾಂದಿ

ಶೃಂಗೇರಿ: 'ದಲಿತರು' ಎಂದರೆ ಶತ ಶತಮಾನಗಳಿಂದ ಯಾವುದೇ ಜಾತಿಯ ಶ್ರೀಮಂತರಿಂದ ಶೋಷಣೆಗೆ, ದಬ್ಬಾಳಿಕೆಗೆ ಒಳಗಾಗಿರುವವರು. ಅಂದರೆ ಈ ದೇಶದ ಶೇ. ೭೫ ಭಾಗ ಜನ ಎಂದು ಹಾಸನ ದಲಿತ ಸಂಘರ್ಷ ಸಮಿತಿಯ ರುದ್ರಸ್ವಾಮಿ ಮಾ. ೨೮ರಂದು ಇಲ್ಲಿ ಹೇಳಿದರು.

ಅವರು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಶೃಂಗೇರಿ ತಾಲ್ಲೂಕು ಶಾಖೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಹರಿಜನ-ಗಿರಿಜನರು, ಲಂಬಾಣಿಗಳು, ಹೊಲೆ ಮಾದಿಗರು ಮುಂತಾದ ಕೀಳೆಂದು ತಿಳಿಯಲ್ಪಟ್ಟ ಜಾತಿಗಳ ಜನರು ಹಾಗೂ ಕಮ್ಮಾರ ಕುಂಬಾರ, ಬಡಗಿ, ಕೃಷಿ ಕೂಲಿ ಮುಂತಾದ ಮೂಲ ಕಸುಬಿನವರೂ ಸೇರಿ ಸುಮಾರು ೫೦ ಕೋಟಿ ಜನ ದಲಿತರಲ್ಲಿ ಪ್ರಮುಖರಾಗಿದ್ದಾರೆ. ಆದರೆ, ಮಾನವೀಯತೆಯನ್ನು ಪ್ರೀತಿಸುವ ಎಲ್ಲರೂ ನಮ್ಮ ಜೊತೆಗಿದ್ದಾರೆ. ಎಂದು ಅವರು ಹೇಳಿದರು.

ಐದಾರು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಪ್ರಾರಂಭವಾದ ದ. ಸಂ. ಸ ದಲಿತರನ್ನು, ದುಡಿಯುವವರನ್ನು ಹೋರಾಟಕ್ಕೆಳೆಸಿದ ಸಂಘ ಎಂದ ರುದ್ರಸ್ವಾಮಿ, ದಲಿತರು ಪೂರ್ತಿ ಒಗ್ಗಟ್ಟಾಗದೆ ಅನ್ಯಾಯ ನೀಗುವುದಿಲ್ಲ. ಇಂದಿರಾಗಾಂಧಿಯಿಂದ ಹಿಡಿದು ಯಾವುದೇ ರಾಜಕೀಯ ಪಕ್ಷವಾಗಲಿ, ದಲಿತ ಮಂತ್ರಿ, ಶಾಸಕರಾಗಲಿ ನಮಗೆ ರಕ್ಷಣೆ ಒದಗಿಸಲಾರರು. ನಮ್ಮನ್ನು ನಾವೇ ಸಂಘಟನೆ ಮಾಡಿಕೊಳ್ಳಬೇಕು, ನಾವೇ ರಕ್ಷಿಸಿಕೊಳ್ಳಬೇಕು ಎಂದರು.

ಅವರು ಮುಂದುವರಿದು, ಹೋರಾಟ ನಮ್ಮ ಜನ್ಮಸಿದ್ಧ ಹಕ್ಕು. ದಲಿತರ ನೋವು ಅಪಮಾನಗಳ ನಡುವಿಂದ ಹುಟ್ಟಿ ಬಂದ ನಾಯಕ ಡಾ॥ ಅಂಬೇಡ್ಕರರ ಹೋರಾಟದ ರಥವನ್ನು ದ. ಸಂ. ಸ ಮುಂದುವರಿಸುತ್ತಿದೆ ಎಂದರು.

ದುಡಿವಜನ— ದುಡಿಸಿ ಸುಖ ಪಡುವ ಜನ

ಕಷ್ಟಪಟ್ಟು ದುಡಿಯುವವರು ಹಾಗೂ, ಬೇರೆಯವರಿಂದ ದುಡಿಸಿ ಸುಖಪಡುವವರು ಎಂಬ ಎರಡು ಬಗೆಯ ಜನರಿದ್ದಾರೆ. ಆದರೆ ಈ ಸಮಾಜ ಈವರೆಗೆ ಬದುಕುವಂತೆ ಮಾಡಿದವರು ಇಲ್ಲಿ ದುಡಿದ ಜನ ಎಂದು ಮುಖ್ಯ ಅತಿಥಿಗಳಾಗಿದ್ದ ಶೃಂಗೇರಿ ಕಾಲೇಜಿನ ಉಪನ್ಯಾಸಕ ಪುಟ್ಟಯ್ಯ ಹೇಳಿದರು.

ದುಡಿವ ಜನ ಒಟ್ಟಾಗಿ ಎದ್ದು ನಿಲ್ಲದಂತೆ ನಮ್ಮ ದೇಶದ ಜಾತಿ ವ್ಯವಸ್ಥೆ ಅಡ್ಡಿಯಾಗಿದೆ ಎಂದ ಅವರು, 'ಜಾತಿಯನ್ನು ಸೃಷ್ಟಿಸಿದ್ದು ದೇವರು!' ಎಂದು ನಮ್ಮನ್ನೆಲ್ಲ ನಂಬಿಸಿ, ತಲೆ ಕೆಲಸ ಮಾಡದಂತೆ ನೋಡಿಕೊಳ್ಳಲಾಗಿ ಎಂದು ಹೇಳಿದರು.

ದೇಶದ ಚರಿತ್ರೆಯ 'ಭವ್ಯತೆ,' 'ಸುವರ್ಣಯುಗ' ಎಂಬುದೆಲ್ಲ ಸುಳ್ಳು ಎಂದ ಅವರು, ದುಡಿದು ತಿನ್ನುವ ಜನ ಎಲ್ಲ ಕಾಲದಲ್ಲೂ ಹೀಗೇ ಹೀನಾಯ ಸ್ಥಿತಿಯಲ್ಲೇ ಇದ್ದರು; ಅವರಿಲ್ಲ, ದುಡಿಯದೆ ಇದ್ದಿದ್ದರೆ ಈ ದೇಶದಲ್ಲಿ 'ಭವ್ಯ' ಎನ್ನಿಸಿಕೊಳ್ಳುವಂಥದ್ದು ಏನಾದರೂ ಇರುತ್ತಿತ್ತೆ? ಎಂದು ಕೇಳಿ, ದುಡಿದು ಬದುಕುವುದೇ ನಿಜವಾದ ಸಂಸ್ಕೃತಿ ಎಂದು ವಿವರಿಸಿದರು.

ಅಂಬೇಡ್ಕರ್‌ರವರು ಗಾಂಧೀಜಿಯವರನ್ನು 'ನಿಮಗೆ ಸ್ವಾತಂತ್ರ್ಯ ಸಿಕ್ಕಿತು. ನನ್ನ ಜನರಿಗೆ ಎಲ್ಲಿ ಸ್ವಾತಂತ್ರ್ಯ?' ಎಂದು ವಿಷಾದದಿಂದ ಕೇಳಿದ್ದನ್ನು ಪುಟ್ಟಯ್ಯ ಜ್ಞಾಪಿಸಿದರು.

ಧರ್ಮದ ಹೆಸರಲ್ಲಿ ಮೋಸ

ಇನ್ನೊಬ್ಬ ಮುಖ್ಯ ಅತಿಥಿ ಜಿಲ್ಲಾ ವಿಚಾರವಾದಿ ಒಕ್ಕೂಟದವರೂ, ಸುಬ್ರಹ್ಮಣ್ಯಂ ಮಾತನಾಡಿ, ನಮಗೆ ಸಾವಿರಾರು ವರ್ಷಗಳ ಭವ್ಯ ಇತಿಹಾಸವಿದೆ ಎನ್ನುತ್ತಾರೆ. ಕೇವಲ ನೂರು ವರ್ಷಗಳ ಹಿಂದೆ 'ಅಸ್ಪೃಶ್ಯರು' ಒಗ್ಗಿ ಧೈರ್ಯವಾಗಿ ಬೀದಿಯಲ್ಲಿ ಘೋಷಣೆ ಕೂಗಲು ಸಾಧ್ಯವಿತ್ತೆ? ಮತ ಎಂಬುದು ನಿಂತು ಅನ್ಯಾಯದ ವಿರುದ್ಧ ಧಿಕ್ಕಾರ ಎನ್ನಲು ಸಾಧ್ಯವಿತ್ತೆ? ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಇತ್ತೀಚಿನವರೆಗೂ ಮನೆಮನೆ ದಲಿತ ಕೂಲಿಯಾಳುಗಳನ್ನು ಮಾರಾಟ ಮಾಡುತ್ತಿದ್ದುದನ್ನು

(ಮುಂದಿನ ಪುಟಕ್ಕೆ)

\+\+ \+\+ \+\+ \+\+ \+\+ \+\+ \+\+ \+\+ \+\+ \+\+ \+\+ \+\+

ಅಂಬೇಡ್ಕರ್ — "ನಮ್ಮ ಇವತ್ತಿನ ಸ್ಥಿತಿಗೆ ಇಡೀ ಹಿಂದೂ ಸಮಾಜ ಕಾರಣ. ಯಾವ ಹಿಂದೂ ನಾಯಕನೂ ನಮ್ಮನ್ನು ರಕ್ಷಿಸಲಾರ. ನಮ್ಮನ್ನು ನಾವೇ ಸಂಘಟಿಸಿಕೊಂಡು ರಕ್ಷಿಸಿಕೊಳ್ಳಬೇಕು."

ಡಾ॥ ರಾಮಮನೋಹರ ಲೋಹಿಯಾ— "ಈ ದೇಶದಲ್ಲಿ ಸ್ವತಂತ್ರ ಸರ್ಕಾರ ನಡೆಸಿದಷ್ಟು ಗೋಲೀಬಾರ್ ಯಾವ ದೇಶದಲ್ಲೂ ನಡೆದಿಲ್ಲ. ಹಾಗೇ, ಈ ದೇಶದ ನಿಜವಾದ ನೆಲದೊಡೆಯರೂ, ಮೂಲ ಜನರೂ ಆದ ಹರಿಜನರ ಮೇಲೆ ನಡೆದಷ್ಟು, ಹಲ್ಲೆ ಬೇರೆ ಯಾವ ದೇಶದ ಮಾನವಜನಾಂಗದ ಮೇಲೂ ನಡೆದಿಲ್ಲ."

ಶ್ರೀಹರ್ಷರ ಬೀದಿಗೆ ಬರುವಾಗ .....

ಗುಪ್ತರ ಕಾಲದಲ್ಲಿ ಸುವರ್ಣಯುಗ ಇತ್ತು; ಆಗ ಸುಖ ಇತ್ತು. ಯಾರಿಗೆ? ಎಂಥ ಸುಖ?..... 'ಪಂಚಮರು ಶ್ರೀಹರ್ಷರ ಬೀದಿಗೆ ಬರುವಾಗ ಜಾಗಟೆ ಬಾರಿಸಿಕೊಂಡು ಬರಬೇಕು!'

ಕೊಪ್ಪ ಆಸ್ಪತ್ರೆಯಲ್ಲಿ 'ಎರಡು ತಲೆ' ಶಿಶು ಜನನ

ಕೊಪ್ಪ: ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಮಾರ್ಚ್ ೨೭ ರಂದು, ತಲೆಯಿಂದ ಇನ್ನೊಂದು ತಲೆಯಂತಹ ಭಾಗ ಜೋಲುತ್ತಿದ್ದ ಮಗುವೊಂದು ಜನಿಸಿದೆ. ತಲೆಯ ಹಿಂಭಾಗದಿಂದ ಜೋಲುತ್ತಿದ್ದ ಈ 'ಅಂಗ' ಅಪೂರ್ಣವಾದ ಇನ್ನೊಂದು ತಲೆಯಾಗಿತ್ತೆಂದು ಆಸ್ಪತ್ರೆಯ ಮಹಿಳಾ ವೈದ್ಯಾಧಿಕಾರಿ ಡಾ. ವಿ. ಸುಶೀಲಾ 'ದೀವಟಿಗೆ'ಗೆ ತಿಳಿಸಿದರು.

ಆಸ್ಪತ್ರೆಗೆ ದಾಖಲಾಗಿದ್ದ ಶ್ರೀಮತಿ ಅರುಣಾ ಎಂಬುವವರಿಗೆ ಈ ಮಗು ಜನಿಸಿದೆ. ಮಧ್ಯಾಹ್ನದಿಂದ ಸಂಜೆಯತನಕ ಡಾಕ್ಟರು, ಸಹಾಯಕಿ ರೆಹನಾ ಖಾನ್, ಆಯಾ ಲೂಸಿ ಬಾಯಿ ಇವರುಗಳು ಶ್ರಮವಹಿಸಿ ಕ್ಷೇಮವಾಗಿ, ಸಹಜ ಹೆರಿಗೆಯ ಮೂಲಕ ಮಗು ಜನಿಸುವಂತೆ ನೋಡಿಕೊಂಡರು.

ತಲೆಯ ಹಿಂಭಾಗದಿಂದ ಈ ಭಾಗವನ್ನು ತಕ್ಷಣ ತೆಗೆದು ಹಾಕದಿದ್ದರೆ ಮಗುವಿನ ಜೀವಕ್ಕೆ ಅಪಾಯವಿದ್ದುದನ್ನು ಗುರುತಿಸಿದ ಡಾ॥ ಸುಶೀಲಾ, ಕೂಡಲೇ ಕೋಡಿಹಳ್ಳಿಯ ಆಸ್ಪತ್ರೆಯ ಸರ್ಜನ್ನರಲ್ಲಿಗೆ ಮಗುವನ್ನು 'ರೆಫರ್' ಮಾಡಿದರು. ರಾತ್ರಿ ೧೧-೩೦ ರ ವರೆಗೆ ಶಸ್ತ್ರಚಿಕಿತ್ಸೆ ನಡೆಸಿ ಅಲ್ಲಿನ ಸರ್ಜನರಾದ ಡಾ॥ ಶೆಟ್ಟಿ ಬೇಡದ ಆ ಭಾಗವನ್ನು ಮಗುವಿನ ತಲೆಯಿಂದ ಬೇರ್ಪಡಿಸುವಲ್ಲಿ ಯಶಸ್ವಿಯಾದರು.

ಸಕಾಲದಲ್ಲಿ ಮಗುವನ್ನು ಆಸ್ಪತ್ರೆಗೆ ಕಳಿಸಿ, ಅದನ್ನು ಅಪಾಯದಿಂದ ಪಾರು ಮಾಡಿದ್ದಕ್ಕಾಗಿ ಸರ್ಜನ್ನರು ಇಲ್ಲಿನ ವೈದ್ಯೆ ಮತ್ತು ಅವರ ಸಿಬ್ಬಂದಿಯನ್ನು ಮೆಚ್ಚಿ ಅಭಿನಂದಿಸಿದರೆಂದು ತಿಳಿದುಬಂದಿದೆ.

ಈಗ ಮಗು ಮತ್ತು ಬಾಣಂತಿ ಕೋಡಿಹಳ್ಳಿನ ಆಸ್ಪತ್ರೆಯಿಂದ ಕ್ಷೇಮವಾಗಿ ಮನೆ ಸೇರಿದ್ದಾರೆ.

ವಿಚಿತ್ರ ಅಂಗಗಳ ಮಗುವೊಂದು ಈ ಆಸ್ಪತ್ರೆಯಲ್ಲಿ ಜನಿಸಿದ್ದು ಇದೇ ಮೊದಲು ಎನ್ನಲಾಗಿದೆ.

ಹರಿಜನ-ಗಿರಿಜನರಿಗಾಗಿ ಕಾನೂನು ನೆರವಿಗೆ ವಕೀಲರ ನೇಮಕ

ಚಿಕ್ಕಮಗಳೂರು: ಹರಿಜನ-ಗಿರಿಜನರಿಗೆ ಕಾನೂನು ನೆರವು ನೀಡಲು ಸರ್ಕಾರ ಚಿಕ್ಕಮಗಳೂರು ಮತ್ತು ಬೇರೆ ಜಿಲ್ಲೆಗಳಲ್ಲಿ ಮೂರು ವರ್ಷಗಳ ಅವಧಿಗೆ ವಕೀಲರನ್ನು ನೇಮಿಸಿದ್ದು, ಚಿಕ್ಕಮಗಳೂರಿಗೆ ಎಸ್. ನಾಗೇಶ ಎಂಬುವವರು ನೇಮಕವಾಗಿದ್ದಾರೆಂದು ವರದಿಯಾಗಿದೆ.

೧ ಕಿ.ವಾ ವಿದ್ಯುಚ್ಛಕ್ತಿ ಬಳಸುವವರಿಗೆ ಠೇವಣಿಯಿಂದ ವಿನಾಯಿತಿ

೧ ಕಿ. ವಾ ವರೆಗೆ ವಿದ್ಯುಚ್ಛಕ್ತಿ ಬಳಸುವ ವಾಣಿಜ್ಯ ಬಳಕೆದಾರರಿಗೆ ಮುಂಗಡ ಠೇವಣಿಯಿಂದ ವಿನಾಯಿತಿ ನೀಡುತ್ತಿದ್ದಾಗಿಯೂ, ಠೇವಣಿ ಹಣ ಕಟ್ಟುವ ಗಡುವನ್ನು ೩೧-೩-೮೨ ರ ವರೆಗೆ ವಿಸ್ತರಿಸಲಾಗಿದೆ ಯೆಂದೂ ವಿದ್ಯುತ್ ಖಾತೆ ರಾಜ್ಯ ಮಂತ್ರಿ ಅಶ್ವತ್ಥ ರೆಡ್ಡಿ ವಿಧಾನಸಭೆಗೆ ಮಾ. ೨೦ ರಂದು ತಿಳಿಸಿದ್ದಾರೆ.

ಇದರಿಂದ, ಒಂದೂ ಕಾಲು ಅಶ್ವಶಕ್ತಿಯ ವರೆಗೆ ವಿದ್ಯುತ್ ಬಳಸುವವರಿಗೆ ವಿನಾಯಿತಿ ಸಿಕ್ಕಂತಾಗುತ್ತದೆ.

ಈ ಪ್ರಕಟಣೆಯ ಬಗ್ಗೆ ಕೊಪ್ಪ ಉಪವಿಭಾಗದ ಅಸಿಸ್ಟೆಂಟ್ ಇಂಜಿನಿಯರನ್ನು 'ದೀವಟಿಗೆ' ಸಂಪರ್ಕಿಸಿದಾಗ ಅವರಿಗೆ ಅಂಥ ಯಾವುದೇ ನಿರ್ದೇಶನ ಅಥವಾ ಸುತ್ತೋಲೆ ಇನ್ನೂ ಬಂದಿರಲಿಲ್ಲ.

ಕುಡಿದು ಹಲ್ಲೆ ಮಾಡಿದ ಯುವಕರಿಗೆ

ಏಟು; ಮೊಕದ್ದಮೆ

ಕೊಪ್ಪ: ಇಲ್ಲಿನ ಬಸ್‌ಸ್ಟ್ಯಾಂಡಿನಲ್ಲಿ ಮಾ. ... ರಂದು ಮಧ್ಯಾಹ್ನ ... ಬ್ಬರ ಮೇಲೆ ... ಯುವಕರ ಮೇಲೆ ಕೊಪ್ಪ ಪೊಲೀಸರು ... ಕೇಸ್ ದಾಖಲು ಮಾಡಿಕೊಂಡಿದ್ದಾರೆಂದು ತಿಳಿದು ಬಂದಿದೆ.

ಬಸ್ ಸ್ಟ್ಯಾಂಡ್ ಪಕ್ಕದ ... ಯುವ ಅಂಗಡಿಯಲ್ಲಿ ... ನ ... ಮಹಿಳೆಯರ ಬಗ್ಗೆ ... ಇದ್ದ ಯುವಕನೊಬ್ಬ ಕುಡಿದ ಅಮಲಿನಲ್ಲಿ ... ಗಿದ. ಇದನ್ನು ವಿರೋಧಿಸಿದ ... ಮೇಲೆ ಕೈ ಮಾಡಿದ, ಅವನಿಂದ ... ಎಂದು ... ಪೊಲೀಸ್ ... ತಿಪ್ಪನನ್ನು ... ಪೊಲೀಸ್ ... ದಾಖಲಾಗಿ ... ಪ್ರತ್ಯಕ್ಷದರ್ಶಿಗಳ ... ಈ ಯುವಕ ... ಎಂದು ತಿಳಿದುಬಂದಿದೆ.

ದಲಿತರ ಸಂಘಟನೆಗೆ ನಾಂದಿ

(ಮೊದಲ ಪುಟದಿಂದ)

ಎತ್ತಿ ಹೇಳಿದ ಅವರು, ಪ್ರಾಣಿಗಳನ್ನು ಪೂಜೆ ಮಾಡುವ ನಮ್ಮ ಜನ ಮನುಷ್ಯರನ್ನು ಮನೆಯೊಳಗೆ ಸೇರಿಸಿಕೊಳ್ಳುವುದಿಲ್ಲ ಎಂದು ಜನರ ಬೂಟಾಟಿಕೆಯನ್ನು ಹಾಸ್ಯ ಮಾಡಿದರು.

ಜಿಲ್ಲಾ ವಿಚಾರವಾದಿ ಒಕ್ಕೂಟವು ಪವಾಡಗಳನ್ನು ವೈಜ್ಞಾನಿಕ ಪರೀಕ್ಷೆಗೊಳಪಡಿಸಿ ಗೆದ್ದವರಿಗೆ ಹತ್ತು ಸಾವಿರ ರೂ. ಕೊಡುವುದಾಗಿ ಸವಾಲು ಹಾಕಿರುವುದನ್ನು ಅವರು ಪ್ರಸ್ತಾಪಿಸಿದಾಗ, ಹಾಲುಗೋಡಿನ ಗಣೇಶಯ್ಯ ಎಂಬುವವರು ಮತ್ತು ಅವರ ಹೆಂಡತಿ ಮೈಮೇಲೆ ದೇವರು ಬರುತ್ತದೆಂದು ಹೇಳಿ ಜನರಿಂದ ಕಾಣಿಕೆ, ದೇಣಿಗೆ ವಸೂಲು ಮಾಡುತ್ತಿದ್ದಾರೆಂದು ಸಭಿಕರೊಬ್ಬರು ಆರೋಪಿಸಿದರು. ಅದಕ್ಕೆ ಸುಬ್ರಹ್ಮಣ್ಯಂ ವೇದಿಕೆಯ ಸವಾಲು ಅವರಿಗೂ ಅನ್ವಯವಾಗುತ್ತದೆಂದು ಹೇಳಿ "ದೇವರ ಹೆಸರಿನಲ್ಲಿ ಜನರಿಗೆ ಮೋಸ ಮಾಡಬೇಡಿ; ಉದಾಹರಣೆಗೆ ಮಕ್ಕಳಿಗೆ ಕಾಯಿಲೆ ಬಂತು ಎಂದು ಕರೆದುಕೊಂಡು ಬಂದವರಿಗೆ ಮೊದಲು ಔಷಧ ಕೊಡಿಸುವಂತೆ ಹೇಳುವಷ್ಟಾದರೂ ಮನುಷ್ಯತ್ವ ತೋರಿಸಿ" ಎಂದು ಕಳಕಳಿಯಿಂದ ಹೇಳಿದರು.

ವೈಮನಸ್ಯಗಳಿಗೆ ಆಸ್ಪದ ಬೇಕೆಂದು ಕಷ್ಟಪಟ್ಟು ಸಂಪಾದಿಸಿದ್ದರಲ್ಲಿ ಕುಡಿಯುತ್ತೀರಿ. ಆದರೆ ಅದರಿಂದ ಕಷ್ಟ, ದುಃಖ, ನೋವು. ಜೊತೆಗೆ ಪ್ರಾಣಹಾನಿಯೂ ಆಗಬಹುದು. ಕುಡಿತ ನಿಲ್ಲಿಸಲಾಗದಿದ್ದರೆ ಮನೆಯಲ್ಲೇ ತಯಾರಿಸಿ, ಕುಡಿದು ನಿದ್ದೆಮಾಡಿ; ಎದ್ದು ಕೆಲಸ ಮಾಡಿ ಎಂದು ಸೇರಿದ್ದ ದಲಿತರಿಗೆ ಕರೆಕೊಟ್ಟರು.

[ಅಧ್ಯಕ್ಷತೆ ವಹಿಸಿದ್ದ ದ.ಸಂ.ಸ. ರಾಜ್ಯ ಸಂಚಾಲಕ ಎಂ. ಡಿ. ಗಂಗಯ್ಯ ಅವರ ಭಾಷಣದ ವರದಿ ಮುಂದಿನ ಸಂಚಿಕೆಯಲ್ಲಿ]

ನಿರ್ಣಯಗಳು

ಶೃಂಗೇರಿ ತಾಲೂಕಿನ ದಲಿತರ ಭೂಮಿ ಸಮಸ್ಯೆಗಳನ್ನು ಸರ್ಕಾರ ಕೂಡಲೇ ಪರಿಹರಿಸಬೇಕು; ದೇಶದ ಉದ್ದಗಲಕ್ಕೂ ನಡೆಯುತ್ತಿರುವ ದಲಿತರ ಕೊಲೆಗಳನ್ನು ತಡೆಗಟ್ಟಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು; ದ. ಸಂ. ಸ. ಕಾರ್ಯಕರ್ತರ ಮೇಲೆ ಕೋಲಾರ, ಮೈಸೂರುಗಳಲ್ಲಿ ಫೆ. ೨೭ರಂದು ಹಲ್ಲೆ ನಡೆಸಿದ ಸಿ. ಎಂ. ಅರ್ಮುಗಂ ಮತ್ತು ಶ್ರೀನಿವಾಸಪ್ರಸಾದರ ಕೃತ್ಯಕ್ಕೆ ಖಂಡನೆ; ಹಾಸನದ ರೈತನಾಯಕರ ಮೇಲಿನ ಗಡೀಪಾರು ನೋಟೀಸು ಹಿಂದೆಗೆದುಕೊಳ್ಳಬೇಕು; ಶೃಂಗೇರಿಯ ಪೌರಕಾರ್ಮಿಕರಿಗೆ ಸರಿಯಾದ ಮನೆಗಳನ್ನು ಒದಗಿಸಬೇಕು — ಎಂಬ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ರಾಧಾಕೃಷ್ಣ ಮತ್ತು ಸಂಗಡಿಗರ ಕ್ರಾಂತಿ ಗೀತೆಯೊಂದಿಗೆ ಸಭೆ ಪ್ರಾರಂಭವಾಯಿತು. ಗುರುಸಿದ್ದಯ್ಯ ಸ್ವಾಗತ,ಪರಿಚಯ ಮಾಡಿದರು. ಟಿ. ಮೂರ್ತಿ ವಂದಿಸಿದರು.

ಸಭೆಗೆ ಮೊದಲು, ಸುತ್ತಮುತ್ತ ಹಳ್ಳಿಗಳಿಂದ ಬಂದಿದ್ದ ಸುಮಾರು ೪೦೦ ಜನ ದಲಿತರು ಘೋಷಣೆಗಳೊಂದಿಗೆ ಶೃಂಗೇರಿಯ ಪ್ರಮುಖ ಬೀದಿಗಳಲ್ಲಿ ಭಾರಿ ಪ್ರದರ್ಶನ ನಡೆಸಿದರು. (ಪೂರ್ಣ ವರದಿ ಮುಂದಿನ ವಾರದ ಸಂಚಿಕೆಯಲ್ಲಿ.)

ಓದುಗರ ಪತ್ರ

ಕೊಪ್ಪ ಆಸ್ಪತ್ರೆಯಲ್ಲಿ ವ್ಯವಸ್ಥೆ ಕೆಟ್ಟಿದೆ

ಈ ನಮ್ಮ ದೊಡ್ಡ ತಾಲೂಕಿಗೆ ಇರುವುದು ಒಂದೇ ಒಂದು ಸರ್ಕಾರಿ ಆಸ್ಪತ್ರೆ. ಈಗೀಗ ಜನರಲ್ಲಿ ಸರ್ಕಾರಿ ಆಸ್ಪತ್ರೆಗೆ ಹೋದರೆ ಕಾಯಿಲೆ ವಾಸಿಯಾಗುವುದೇ ಇಲ್ಲ ಎಂಬ ಒಂದು ದೃಢವಾದ ನಂಬಿಕೆಯೇ ಹುಟ್ಟಿದೆ. ಪಾಪ, ಊಟಕ್ಕೆ ಗತಿ ಇಲ್ಲದೇ ಇರುವ ಕಡು ಬಡವರು ಮಾತ್ರ ಸರ್ಕಾರಿ ಆಸ್ಪತ್ರೆಗಳಿಗೆ ಬರುವುದು. ಆದ್ದರಿಂದ ಸರ್ವೆಸಾಮಾನ್ಯವಾಗಿ ಅಲ್ಲಿನ ವ್ಯವಸ್ಥೆಯಲ್ಲಿ ಕೊರತೆ ಇರುತ್ತದೆ. ಏಕೆ, ಬಡವರೆಂದ ಮಾತ್ರಕ್ಕೆ ಅವರಿಗೆ ಯಾವ ಸೌಕರ್ಯ ಬೇಡವೇ?

ಹಿಂದೆ ಇದ್ದ ವೈದ್ಯಾಧಿಕಾರಿಗಳ ಅಸಡ್ಡೆಯ ಸ್ವಭಾವವನ್ನರಿತ ಜನರು ಯಾರೂ ವಾರ್ಡಿಗೆ ದಾಖಲಾಗುತ್ತಲೇ ಇರಲಿಲ್ಲ. ಆದರೆ ಈಗಿನ ವೈದ್ಯಾಧಿಕಾರಿಗಳ ಕರ್ತವ್ಯ ನಿಷ್ಠೆ ಮತ್ತು ಶ್ರದ್ಧೆಯಿಂದಾಗಿ ಎಲ್ಲ ವಾರ್ಡ್‌ಗಳೂ ತುಂಬಿರುತ್ತವೆ.

ಈ ರೋಗಿಗಳ ದುಃಸ್ಥಿತಿಯೆಂದರೆ, ಮಲಮೂತ್ರ ವಿಸರ್ಜನೆಗೆ ಇರುವ ಸೌಕರ್ಯವು ತನ್ನ ಕಾರ್ಯವನ್ನು ನಿಲ್ಲಿಸಿದೆ. ಇದರಿಂದ ರೋಗಿಗಳೆಲ್ಲಾ ಆಸ್ಪತ್ರೆಯ ಆವರಣದಲ್ಲೇ ಎಲ್ಲಾದರೂ ತಮ್ಮ ಕೆಲಸಗಳನ್ನು ಪೂರೈಸುವುದರಿಂದ ಅಲ್ಲಿನ ಸ್ವಚ್ಛತೆಗೆ ಅಡ್ಡಿ ಬರುವುದಲ್ಲದೆ, ಯಾವುದಾದರೂ ಕಾಯಿಲೆ ಅವರಿಗೆ ಅಂಟುವುದಿಲ್ಲವೇ? ಆಹಾರದ ವಿಷಯದಲ್ಲಿ ಒಮ್ಮೊಮ್ಮೆ ತೊಂದರೆ ಬಂದರೂ ಕೂಡ ಹೆಚ್ಚಿನ ತೊಂದರೆ ಏನೂ ಇಲ್ಲ.

ವೈದ್ಯಾಧಿಕಾರಿಗಳು ದಯವಿಟ್ಟು ಈ ಬಗ್ಗೆ ಗಮನಹರಿಸಿ ಮೇಲೆ ತಿಳಿಸಿದ ತೊಂದರೆಯನ್ನು ನಿವಾರಿಸಲು ಕ್ರಮ ತೆಗೆದುಕೊಂಡು ರೋಗಿಗಳ ಕಷ್ಟವನ್ನು ಪರಿಹರಿಸಬೇಕಾಗಿ ವಿನಂತಿ.

ಕೊಪ್ಪ. ಎಂ. ಎಸ್. ಸತೀಶ.

ಕೊಪ್ಪ ತಾ. ಅ. ಮಂಡಳಿಯಿಂದ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ಕೆ ೧೨ ಲಕ್ಷ ರೂ. ಖರ್ಚು

ಕೊಪ್ಪ: ಇಲ್ಲಿನ ತಾ. ಅ. ಮಂಡಳಿಯು ಮುಖಾಂತರ ತಾಲೂಕಿನಲ್ಲಿ ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆಯು ಶಾಲೆ, ಪಂಚಾಯ್ತಿ, ಮಹಿಳಾಸಮಾಜ, ಯುವಕ ಸಂಘ, ಸಾಮೂಹಿಕ ಕಲ್ಯಾಣ ಕೇಂದ್ರ ಮುಂತಾದ ಕಟ್ಟಡಗಳು, ರಂಗಮಂಟಪ, ಬಸ್ಸು ತಂಗುದಾಣ, ಮೋರಿ, ಕಾಲುಸಂಕ, ಮುಂತಾದ ಗ್ರಾಮಾಂತರ ಪ್ರದೇಶ ಅಭಿವೃದ್ಧಿ ಕೆಲಸಗಳಿಗಾಗಿ ಅಂದಾಜು ೧೨ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆಯೆಂದೂ, ಚಿಕ್ಕಮಗಳೂರು ಜಿಲ್ಲೆಯಲ್ಲೇ ಈ ತಾಲೂಕು ಅತಿ ಹೆಚ್ಚು ಪ್ರಗತಿ ಸಾಧಿಸಿದೆಯೆಂದೂ ಮಂಡಳಿ ಅಧ್ಯಕ್ಷ ಬಿ. ಜಿ. ಚಿದಂಬರ್ ತಿಳಿಸಿದ್ದಾರೆ.

ತಾ. ಅ. ಮಂ. ಸ್ಥಾಯೀ ಸಮಿತಿ ಸಭೆ

ಕೊಪ್ಪ: ಇಲ್ಲಿನ ತಾ| ಅ| ಮಂಡಳಿಯ ಸ್ಥಾಯೀ ಸಮಿತಿ ಸಭೆ ಏ. ೩ ರಂದು ಬಿ. ಜಿ. ಚಿದಂಬರ್ ರವರ ಅಧ್ಯಕ್ಷತೆಯಲ್ಲಿ ನಡೆದು, 82-83 ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು ಪರಿಶೀಲಿಸಿ, ಉಚಿತಾಯ ಆಯವ್ಯಯ ಪತ್ರವನ್ನು ತಾ. ಅ. ಮಂಡಳಿಗೆ ಶಿಫಾರಸ್ಸು ಮಾಡಿತು.

ಜೋಡನಾಥ ಅಯ್ಯರ್ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ

ಚಿಕ್ಕಮಗಳೂರು: ಜಿಲ್ಲಾ ಪತ್ರಕರ್ತರ ಸಂಘದ ನೂತನ ಸಾಲಿಗೆ ಅಧ್ಯಕ್ಷರಾಗಿ 'ಹೊಸ ದಿಗಂತ' ಸಂಪಾದಕ ಜೋಡನಾಥ ಅಯ್ಯರ್, ಕಾರ್ಯದರ್ಶಿಯಾಗಿ 'ಗಿರಿವಾರ್ತಾ'ದ ಶಂಕರಸಿಂಗ್ ಅವರುಗಳು ಮಾ. ೨೮ರಂದು ಇಲ್ಲಿ ನಡೆದ ಸರ್ವಸದಸ್ಯರಸಭೆಯಲ್ಲಿ ಆಯ್ಕೆಯಾಗಿದ್ದಾರೆ. ಅವರಿಗೂ, ಇತರ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಿಗೂ 'ದೀವಟಿಗೆ'ಯ ಅಭಿನಂದನೆಗಳು.

'ಜಾಗೃತ' ಬಿಡುಗಡೆ

ಅದೇ ದಿನ ಡಿ. ಸಿ. ಸಿ ಬ್ಯಾಂಕ್ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ, ಕಾಫಿ ಬೆಳೆಗಾರ ಎ. ಸಿ. ಶಿವೇಗೌಡರು ಜಿಲ್ಲಾ ಪತ್ರಕರ್ತರ ಮಾಹಿತಿ ಕೈಪಿಡಿ 'ಜಾಗೃತ' ಬಿಡುಗಡೆ ಮಾಡಿದರು.

ಜಿಲ್ಲಾ ಪತ್ರಕರ್ತರ ಕ್ಷೇಮ ನಿಧಿಗೆ ೧,೨೫೨ ರೂ.ಗಳ ದೇಣಿಗೆ ಸಂಗ್ರಹವಾಯಿತು.

ಕುಟುಂಬ ಕಲ್ಯಾಣ ಸಮಿತಿ ಸಭೆ; ಶಿಬಿರ ವ್ಯವಸ್ಥೆ ಚರ್ಚೆ

ಕೊಪ್ಪ: ತಾಲೂಕು ಮಟ್ಟದ ಕುಟುಂಬ ಕಲ್ಯಾಣ ಸಮಿತಿಯ ಸಭೆ ಏ. ೩ ರಂದು ಬಿ. ಜಿ. ಚಿದಂಬರ್‌ರವರ ಅಧ್ಯಕ್ಷತೆಯಲ್ಲಿ ಸೇರಿ, ಏ. ೨೧ ರಂದು ಕೊಪ್ಪದಲ್ಲಿ ನಡೆಯಲಿರುವ ಉದರ ದರ್ಶಕ (ಲ್ಯಾಪ್ರೊಸ್ಕೋಪಿಕ್) ಸಂತಾನಹರಣ ಶಸ್ತ್ರ ಚಿಕಿತ್ಸಾ ಶಿಬಿರದ ವಿವರಗಳನ್ನು ಚರ್ಚಿಸಿತು.

ಕೊಪ್ಪ ವೈದ್ಯಾಧಿಕಾರಿ ಡಾ|| ಆರ್. ಜಿ. ರಂಗನಾಥನ್ ಉದರದರ್ಶಕ ಶಸ್ತ್ರಚಿಕಿತ್ಸಾ ವಿಧಾನವನ್ನು ಕುರಿತು ವಿವರಿಸಿದರು.

ಸುಮಾರು ೧೧ ಸಾವಿರ ರೂ. ವೆಚ್ಚದಲ್ಲಿ ನಡೆಯುವ ಈ ಶಿಬಿರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾ. ಅ. ಮಂಡಳಿ, ಪುರಸಭೆ, ಲಯನ್ಸ್ ಕ್ಲಬ್, ಮಹಿಳಾ ಸಮಾಜ, ತಾ| ಯುವಜನ ಒಕ್ಕೂಟ, ಪಂಚಾಯ್ತಿಗಳು, ಬ್ಯಾಂಕರ್ಸ್ ರಿಕ್ರಿಯೇಶನ್ ಕ್ಲಬ್ ಮತ್ತಿತರ ಸಂಘ ಸಂಸ್ಥೆಗಳ ಆಶ್ರಯದಲ್ಲಿ ಬಾಳಗಡಿಯಲ್ಲಿನ ಜೂನಿಯರ್ ಕಾಲೇಜು ಆವರಣದಲ್ಲಿ ನಡೆಯುತ್ತದೆ.

ಶೃಂಗೇರಿಯಲ್ಲಿ ಏ. ೨೨ರಂದು ಇಂಥದೇ ಶಿಬಿರ ವ್ಯವಸ್ಥೆಯಾಗಿದೆ.

ಯುವಜನ ಒಕ್ಕೂಟದ ಮಹಾಸಭೆ

ಕೊಪ್ಪ: ಏ. ೪ರಂದು ಹೆಚ್. ಎಂ. ಶ್ರೀಧರ [illegible]ರವರ ಅಧ್ಯಕ್ಷತೆಯಲ್ಲಿ ಸೇರಿದ್ದ ತಾ|| ಯುವಜನ ಒಕ್ಕೂಟದ ಮಹಾಸಭೆಯು, ಏ.೨೧ರಂದು ನಡೆಯಲಿರುವ ಉದರದರ್ಶಕ ಶಸ್ತ್ರಚಿಕಿತ್ಸಾ ಶಿಬಿರಕ್ಕೆ ಹೆಚ್ಚು ಸಂಖ್ಯೆಯಲ್ಲಿ ಅರ್ಹ ಮಹಿಳೆಯರನ್ನು ಕರೆತರಬೇಕೆಂದೂ, ಮೇ ಮಧ್ಯಭಾಗದಲ್ಲಿ [illegible] ಮಟ್ಟದ ಯುವಜನ ಕ್ರೀಡಾ ಕೂಟವನ್ನು ಏರ್ಪಡಿಸಬೇಕೆಂದೂ, ಯುವಜನ ಒಕ್ಕೂಟದ ಕಚೇರಿಗಾಗಿ ಬಾಳಗಡಿಯಲ್ಲಿ ನಿವೇಶನ ಮತ್ತು ಕಟ್ಟಡಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳಬೇಕೆಂದೂ ನಿರ್ಣಯ ಮಾಡಿತು.

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ
ಸಿರಿಮನೆ ನಾಗರಾಜ್
ಅಚ್ಚು : ನೇಸರ ಮುದ್ರಣ, ಕೊಪ್ಪ